# ಕರ್ನಾಟಕ ವಿಧಾನ ಪರಿಷತ್

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1050

ಉತ್ತರಿಸಬೇಕಾದ ದಿನಾಂಕ : 29.09.2020

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೋಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತವು ಯಾವ ವರ್ಷದಲ್ಲಿ ಸ್ಥಾಪನೆಯಾಗಿದೆ ಹಾಗೂ ಎಷ್ಟು ಸಂಖ್ಯೆಯ ಸದಸ್ಯ ಹಾಗೂ ಸಹ ಸದಸ್ಯರುಗಳನ್ನು ಹೊಂದಿರುತ್ತದೆ: | 2014-15 ರಲ್ಲಿ ಸ್ಥಾಪನೆಯಾಗಿರುತ್ತದೆ. ಸಂಘದಲ್ಲಿ 17552 ಸದಸ್ಯರು ಮತ್ತು 306 ಸಹ ಸದಸ್ಯರಿರುತ್ತಾರೆ. |
| ಆ) | ಸದರಿ ಸಹಕಾರ ಸಂಘವು ಎಷ್ಟು ಕಡೆ ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡಲು ಉದ್ದೇಶಿಸಿದೆ ಅಥವಾ ನೀಡಿದೆ: | ಈ ಕೆಳಕಂಡ ಸ್ಥಳಗಳಲ್ಲಿ ಸಂಘವು ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡಲು ಉದ್ದೇಶಿಸಿದೆ.<br><br>1) **ನೆಲಮಂಗಲ ಯೋಜನೆ:**<br>ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಲ್ಲರಬಾಣವಾಡಿ, ಹಂಚೀಪುರ ಹಾಗೂ ವಡ್ಡರಪಾಳ್ಯ<br><br>2) **ಮೈಸೂರು:**<br>ಅ) <u>ಇಲವಾಲ-ಮೈಸೂರು ಯೋಜನೆ :</u><br>ಆ) <u>ತಳೂರು - ಮೈಸೂರು ಯೋಜನೆ :</u><br>ಇ) <u>ಮೈಸೂರು ಬನ್ನೂರು ರಸ್ತೆ (ಬೊಂತಗಳ್ಳಿ) ಯೋಜನೆ.</u><br><br>3) **ಬಂಗಾರಪೇಟೆ:**<br>ದೊಡ್ಡಅಂಕಂಡಹಳ್ಳಿ ಬಂಗಾರಪೇಟೆ ತಾಲ್ಲೂಕು ಕೋಲಾರ ಜಿಲ್ಲೆ,<br><br>4) **ಕೋಲಾರ:**<br>ಗಣೇಶಪುರ ಗ್ರಾಮ, ಕಸಬಾ ಹೋಬಳಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ,<br><br>5) **ಹುಣಸೂರು ಯೋಜನೆ.:**<br>ಹುಣಸೂರು ಗ್ರಾಮ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.<br><br>6) **ಹಾಸನ ಯೋಜನೆ:**<br>ದೊಡ್ಡಪುರ ಹಾಗೂ ಚಿಟ್ಟನಹಳ್ಳಿ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ, |

| | | |
|---|---|---|
| ಇ) | ಸದರಿ ಸಂಘವು ನೆಲಮಂಗಲದ ಹತ್ತಿರ ನಿವೇಶನ ನೀಡಲು ಉದ್ದೇಶಿಸಿದೆಯೇ? ಉದ್ದೇಶಿಸಿದ್ದಲ್ಲಿ ಎಷ್ಟು ಜನ ಸದಸ್ಯರಿಗೆ ಹಾಗೂ ಸಹ ಸದಸ್ಯರುಗಳಿಗೆ ಹಂಚಿಕೆ ಮಾಡಲಾಗುವುದು: | ಸಂಘವು ನೆಲಮಂಗಲದ ಹತ್ತಿರ ನಿವೇಶನ ನೀಡಲು ಯೋಜನೆ ಹಾಕಿಕೊಂಡಿದೆ. ಸುಮಾರು 1750 ಸದಸ್ಯರಿಗೆ ಹಾಗೂ ಸುಮಾರು 150 ಸಹ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲು ಉದ್ದೇಶಿಸಿರುತ್ತಾರೆ. |
| ಈ) | ಸದರಿ ಸಂಘವು ನಿವೇಶನ ಹಂಚಿಕೆ ಮಾಡಲು ವಿಳಂಬವಾಗಿರಲು ಕಾರಣಗಳೇನು:<br><br>(ವಿವರ ನೀಡುವುದು) | ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ, ಜಮೀನುಗಳನ್ನು ಭೂ ಪರಿವರ್ತನೆಗೊಳಿಸಲು, ವಸತಿ ವಿನ್ಯಾಸ ನಕ್ಷೆ ಪಡೆಯಲು ಕಂದಾಯ ಇಲಾಖೆ, ಸರ್ವೇ ಇಲಾಖೆಗಳಿಂದ ಹಾಗೂ ಸಕ್ಷಮ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನೀಡಲು ಹಲವಾರು ದಾಖಲಾತಿ ಕಡತಗಳನ್ನು ಹೊಂದಿಸಬೇಕಾಗಿದ್ದು ಹಾಗೂ ವಿವಿಧ ಇಲಾಖೆಗಳಿಂದ N.O.C ಗಳನ್ನು ಮತ್ತು ಅನುಮತಿಗಳನ್ನು ಪಡೆದುಕೊಳ್ಳಬೇಕಾಗಿದ್ದು ಈ ಕಾರಣದಿಂದಾಗಿ ನಿವೇಶನ ಹಂಚಿಕೆ ಮಾಡಲು ವಿಳಂಬವಾಗಿರುತ್ತದೆ ಎಂದು ಸಂಘವು ವರದಿಸಿರುತ್ತದೆ. |
| ಉ) | ಸದರಿ ಸಂಘದ ಸದಸ್ಯ ಹಾಗೂ ಸಹ ಸದಸ್ಯರುಗಳಿಗೆ ನಿವೇಶನ ನೀಡದೇ ಇರುವುದರಿಂದ ಅವರ ಕೋರಿಕೆಗೆ ಅನುಗುಣವಾಗಿ ಅವರು ಪಾವತಿಸಿರುವ ಹಣ ವಾಪಸ್ ಮಾಡಲಾಗುವುದೇ: | ಸಂಘವು ಈಗಾಗಲೇ ಜಮೀನುಗಳನ್ನು ಖರೀದಿ ಮಾಡಿದ್ದು ಬಡಾವಣೆ ನಿರ್ಮಾಣದ ಕೆಲಸ ಕಾರ್ಯಗಳು ಪ್ರಗತಿಯಲ್ಲಿದ್ದು ನಿವೇಶನಕ್ಕಾಗಿ ಹಣ ಪಾವತಿ ಮಾಡಿರುವವರಿಗೆ ನಿವೇಶನಗಳನ್ನು ನೀಡಲಾಗುವುದು. ಸದಸ್ಯರು ಹಣ ವಾಪಸ್ಸು ಪಡೆಯಲು ಕೋರಿಕೆ ಪತ್ರ ನೀಡಿದರೆ ಅವರು ಪಾವತಿಸಿರುವಂತ ಹಣವನ್ನು ನಿಯಮಾನುಸಾರ ವಾಪಸ್ಸು ನೀಡಲಾಗುವುದು ಎಂದು ಸಂಘವು ವರದಿಸಿರುತ್ತದೆ. |
| ಊ) | ಈ ಸಂಘವು ಎಷ್ಟು ಮುಂಗಡ ಹಣವನ್ನು ಸಂಗ್ರಹಿಸಿದೆ ಯಾವಯಾವ ಉದ್ದೇಶಗಳಿಗೆ ಮುಂಗಡ ಹಣವನ್ನು ವಿನಿಯೋಗಿಸಲಾಗಿರುತ್ತದೆ ಹಾಗೂ ಸದಸ್ಯ ಮತ್ತು ಸಹ ಸದಸ್ಯರುಗಳು ಎಷ್ಟು ಮುಂಗಡ ಹಣ ಪಾವತಿಸಿರುತ್ತಾರೆ?<br><br>(ವಿವರಗಳನ್ನು ಒದಗಿಸುವುದು) | ಸಂಘವು 31.03.2019 ರ ಅಂತ್ಯಕ್ಕೆ ಒಟ್ಟು 26,623.06 ಲಕ್ಷ ರೂಗಳನ್ನು ನಿವೇಶನ ಮುಂಗಡ ಮತ್ತು ಕಂತುಗಳನ್ನು ಸಂಗ್ರಹಿಸಿದೆ. ಈ ಹಣವನ್ನು ಜಮೀನುಗಳ ಖರೀದಿ ಮತ್ತು ಬಡಾವಣೆ ಅಭಿವೃದ್ಧಿ ಕಾರ್ಯಕ್ಕಾಗಿ ವಿನಿಯೋಗಿಸಲಾಗಿದೆ ಹಾಗೂ ಸಂಘದ ಸದಸ್ಯರು ಮತ್ತು ಸಹಸದಸ್ಯರುಗಳಿಂದ ಒಟ್ಟು 26,623.06 ಲಕ್ಷ ರೂಗಳನ್ನು ಸಂಗ್ರಹಿಸಿರುತ್ತಾರೆ. |

ಕಡತ ಸಂಖ್ಯೆ: ಸಿಒ 46 ಸಿಹೆಚ್‌ಎಸ್ 2020 (ಇ)

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು